ಕರ್ನಾಟಕ ಸರ್ಕಾರ
ಸ್ವಾತಂತ್ರ್ಯದ ಅಮೃತ ಮಹೋತ್ಸವ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ
ಲಲಿತಮಹಲ್ ರಸ್ತೆ, ಮೈಸೂರು-570 011 ದೂ:0821-2522901/906
ಇ-ಮೇಲ್: sird-mysuru@ka.gov.in

ಕಡತ ಸಂಖ್ಯೆ: SIRDPR-TRG/2/2022 ದಿನಾಂಕ: 24-08-2022

ಇವರಿಗೆ,

**ಕಾರ್ಯನಿರ್ವಾಹಕ ಅಧಿಕಾರಿಗಳು,**
**ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳು.**

ಮಾನ್ಯರೇ,

**ವಿಷಯ:** ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಸಿದ್ಧಪಡಿಸುವ ಕುರಿತು ದಿನಾಂಕ: 01-09-2022ರಂದು **ಉಪಗ್ರಹ/ ಯೂ-ಟ್ಯೂಬ್** ಮೂಲಕ ತಾಲ್ಲೂಕು ಪಂಚಾಯಿತಿಗಳಲ್ಲಿ ತರಬೇತಿಯನ್ನು ಆಯೋಜಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದನ್ವಯ ಗ್ರಾಮ ಪಂಚಾಯಿತಿಗಳು 5 ವರ್ಷಗಳ ದೂರದೃಷ್ಟಿ ಯೋಜನೆಯನ್ನು ಸರ್ಕಾರದ ಆದೇಶದನ್ವಯ ಸಿದ್ಧಪಡಿಸಬೇಕಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಶಿಬಿರಾರ್ಥಿಗಳನ್ನೊಳಗೊಂಡ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ರಾಜ್ಯದ **176 ತಾಲ್ಲೂಕು ಪಂಚಾಯಿತಿಗಳಲ್ಲಿ ಉಪಗ್ರಹದ ಮೂಲಕ** ಹಾಗೂ **ನೂತನವಾಗಿ ರಚನೆಯಾಗಿರುವ ತಾಲ್ಲೂಕುಗಳಲ್ಲಿ ಯೂ-ಟ್ಯೂಬ್ (Youtube)** ಮೂಲಕ ದಿನಾಂಕ: **01-09-2022ರ** ಬೆಳಿಗ್ಗೆ **10.00 ಗಂಟೆಗೆ** ಆಯೋಜಿಸಲು ಕೋರಲಾಗಿದೆ.

| ಕ್ರ.ಸಂ | ಶಿಬಿರಾರ್ಥಿಗಳ ವಿವರ | ಸಂಖ್ಯೆ |
|---|---|---|
| 1. | ಕಾರ್ಯನಿರ್ವಾಹಕ ಅಧಿಕಾರಿಗಳು | 1 |
| 2. | ಸಹಾಯಕ ಕಾರ್ಯದರ್ಶಿ (ಜಿ.ಪಂ) | 1 |
| 3. | ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರು | 2 |
| 4. | ತಾಲ್ಲೂಕು ಯೋಜನಾಧಿಕಾರಿ | 1 |
| 5. | ತಾಲ್ಲೂಕು ಸಾಮಾಜಿಕ ಪರಿಶೋಧನ ಸಂಯೋಜಕರು | 1 |
| 6. | ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು | ಆಯಾ ತಾಲ್ಲೂಕು ವ್ಯಾಪ್ತಿಯ ಎಲ್ಲಾ ಪಿ.ಡಿ.ಒಗಳು |

ತರಬೇತಿಗೆ ಸಂಬಂಧಿಸಿದ ಹಾಜರಾತಿಯನ್ನು ಸಂಸ್ಥೆಯು ನಿಗಧಿಪಡಿಸಿರುವ ಎಕ್ಸೆಲ್ ಶೀಟ್‌ನಲ್ಲಿ (ಇಂಗ್ಲೀಷ್) ಅನುಬಂಧ-1ರಂತೆ, ವೆಚ್ಚದ ತಖ್ತೆ – ಅನುಬಂಧ-2-3ರಂತೆ, ಹಾಗೂ ಸಂಸ್ಥೆಯು ಸೃಜಿಸಿರುವ ಆಯಾ ಜಿಲ್ಲಾ ಇ-ಮೇಲ್ ಅನುಬಂಧ-4ರಂತೆ ಕಳುಹಿಸಿಕೊಡಲು ಈ ಮೂಲಕ ಕೋರಲಾಗಿದೆ.

ಹೊಸದಾಗಿ ರಚನೆಯಾಗಿರುವ ತಾಲ್ಲೂಕು ಪಂಚಾಯಿತಿಗಳು ತರಬೇತಿಯ ಅನುದಾನ ಬಿಡುಗಡೆಗಾಗಿ ಉಳಿತಾಯ ಖಾತೆಯ ಸಂಖ್ಯೆಯನ್ನು ಪಾಸ್‌ಬುಕ್ ಪ್ರತಿಯೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಇ-ಮೇಲ್ ಐಡಿಗೆ ಕೂಡಲೇ ಕಳುಹಿಸಲು ಕೋರಲಾಗಿದೆ.

ತರಬೇತಿಗೆ ಸಂಬಂಧಪಟ್ಟ ಅನುಬಂಧಗಳನ್ನು ಸಂಸ್ಥೆಯ ವೈಬ್‌ಸೈಟ್ sirdmysuru.karnataka.gov.in ರಿಂದ ಡೌನ್‌ಲೋಡ್ ಮಾಡಿಕೊಳ್ಳಲು ತಿಳಿಸಿದೆ.

ತರಬೇತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಡಾ. ಜಿ.ಎಸ್. ಗಣೇಶ್‌ಪ್ರಸಾದ್ (9480850117) ಮತ್ತು ಜಿ. ಮಲ್ಲಿಕಾರ್ಜುನ ಸ್ವಾಮಿ (9480850104), ದೀಪ ಎನ್ (9480850114) ಇವರನ್ನು ಸಂಪರ್ಕಿಸಬಹುದಾಗಿದೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,
**ಸಹಿ/-**
**ನಿರ್ದೇಶಕರು**
**ಅ.ನ.ಸಾ.ರಾ.ಗ್ರಾ.ಪಂ.ರಾ.ಸಂಸ್ಥೆ, ಮೈಸೂರು**

ಪ್ರತಿಯನ್ನು:

1. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಕರ್ನಾಟಕ ಸರ್ಕಾರ ಇವರಿಗೆ ಮಾಹಿತಿಗಾಗಿ
2. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು** (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಕರ್ನಾಟಕ ಸರ್ಕಾರ ಇವರಿಗೆ ಮಾಹಿತಿಗಾಗಿ
3. **ಆಯುಕ್ತರು,** ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಕರ್ನಾಟಕ ಸರ್ಕಾರ ಇವರಿಗೆ ಮಾಹಿತಿಗಾಗಿ
4. **ಆಯುಕ್ತರು,** ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಕರ್ನಾಟಕ ಸರ್ಕಾರ ಇವರಿಗೆ ಮಾಹಿತಿಗಾಗಿ
5. **ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,** ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಮಾಹಿತಿಗಾಗಿ
6. **ನಿರ್ದೇಶಕರು,** ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಕರ್ನಾಟಕ ಸರ್ಕಾರ ಇವರಿಗೆ ಮಾಹಿತಿಗಾಗಿ
7. ಸಂಬಂಧಪಟ್ಟ ಸಂಸ್ಥೆಯ ಜಿಲ್ಲಾ ನೋಡಲ್ ಬೋಧಕರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.

**ನಿರ್ದೇಶಕರು**
**ಅ.ನ.ಸಾ.ರಾ.ಗ್ರಾ.ಪಂ.ರಾ.ಸಂಸ್ಥೆ, ಮೈಸೂರು**